# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆಃ 88/21

**ಸಾಕ್ಷಿಯನ್ನು ದಿಃ 20.03.2023 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ಚಂದ್ರಶೇಖರ | ಸಿ.ಡಬ್ಲ್ಯೂಃ 1 | ಪಿ.ಡಬ್ಲ್ಯೂಃ 1 |
| ತಂದೆಯ ಹೆಸರು | ನರಸೇಗೌಡ | | |
| ವಯಸ್ಸು | 41 ವರ್ಷ | | |
| ಕೆಲಸ | ವಕೀಲರು | | |
| ವಾಸಸ್ಥಳ | ಕಲ್ಲುಣಿಕೆ | | |

## ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

ದಿಃ 04.05.2020 ರಂದು ಸಂಜೆ 6.30 ರಲ್ಲಿ ಕೋವಿಡ್ ಸಮಯ ಇದ್ದ ಕಾರಣ ನಾನು ಸೋಲಿಗ ಬೀದಿ ಬಳಿ ಇರುವಾಗ ಅರಳಿಮರದ ಬೀದಿಯಲ್ಲಿ ಯಾರೋ ಕೂಗಾಡುತ್ತಿರುವುದು ಕಂಡುಬಂದು ನಾನು ಹೋಗಿ ನೋಡಿದಾಗ ಅಲ್ಲಿ ನಮ್ಮ ಅಣ್ಣ ನರಸಯ್ಯ ಚಾಸಾ-2 ರವರಿಗೆ 1,2 ಮತ್ತು 4 ನೇ ಆರೋಪಿತರು ಕತ್ತಿನ ಪಟ್ಟಿ ಹಿಡಿದುಕೊಂಡಿದ್ದರು. ನಾನು ಹೋಗಿ ಶಿವರಾಜು ಅವರಿಗೆ ನೀವು ನಾಲ್ಕು ಜನರಿಗೆ ಬುದ್ದಿ ಹೇಳುವವರು ಈ ರೀತಿ ಹಿಡಿಯುವುದು ತಪ್ಪು ಎಂದು ಹೇಳಿದೆ. ಆಗ 1 ನೇ ಆರೋಪಿ ನನ್ನ ಕತ್ತನ್ನು ಹಿಡಿದು ನನ್ನ ಹೆಂಡತಿ ವಿರುದ್ದ ನಿನ್ನ ಹೆಂಡತಿಯನ್ನು ಎಲೆಕ್ಷನ್ ಗೆ ನಿಲ್ಲಿಸುತ್ತೀಯಾ ಎಂದು ಕತ್ತನ್ನು ಅಮುಕಿದರು. ಆಗ 2 ನೇ ಆರೋಪಿ ಮಚ್ಚನ್ನು ಹಿಡಿದು ನನ್ನ ಮೇಲೆ ಮಚ್ಚು ಬೀಸಿದರು. ನಾನು ತಪ್ಪಿಸಿಕೊಂಡೆ. ಅಷ್ಟರಲ್ಲಿ ಚಾಸಾ-3,4 ಮತ್ತು ಉಮೇಶರವರು ಬಂದರು. ಅವರ ಜೊತೆ ಕೂಡ 2,4 ನೇ ಆರೋಪಿತರು ಗಲಾಟೆ ಮಾಡಿ 4 ನೇ ಆರೋಪಿ ಚಾಸಾ-4 ರವರಿಗೆ ಕಲ್ಲಿನಿಂದ ಹಣೆಗೆ ಹಲ್ಲೆ ಮಾಡಿದರು. ನನಗೆ 3 ನೇ ಆರೋಪಿ ದೊಣ್ಣೆಯಿಂದ ಬೆನ್ನಿಗೆ ಹಲ್ಲೆ ಮಾಡಿದರು. 4 ನೇ ಆರೋಪಿ ಕುಮಾರ ಕಲ್ಲಿನಿಂದ ಕೆನ್ನೆಗೆ ಮತ್ತು ತುಟಿಗೆ ಹಲ್ಲೆ ಮಾಡಿದರು. ಆಗ ಚಾಸಾ-6 ಗೋವಿಂದ ಎಂಬುವವರು ಬಂದು ನನ್ನನ್ನು ಹುಣಸೂರಿನ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿದೆ.

ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.1 ಎಂದು ಸಾಕ್ಷಿಯ ಸಹಿಯನ್ನು ನಿಪಿ.1 ಎ ಎಂದು ಗುರುತಿಸಲಾಯಿತು. ನಾನು ಆಸ್ಪತ್ರೆಯಲ್ಲಿ ಇದುದರಿಂದ ನನ್ನ ಅಣ್ಣ ನರಸಯ್ಯ ಚಾಸಾ–2 ಮತ್ತು 6 ರವರು ಮಹಜರ್ ಗೆ ಹೋಗಿದ್ದರು. ನ್ಯಾಯಾಲಯದ ಮುಂದಿರುವ ಕಂದು ಬಣ್ಣದ ಕಲ್ಲ ಅನ್ನುಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಅದೇ ಕಲ್ಲಿನಿಂದ 4 ನೇ ಆರೋಪಿ ನನ್ನ ಮೇಲೆ ಹಲ್ಲೆ ಮಾಡಿರುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಕಲ್ಲನ್ನು ಮು.ಮಾ–1 ಎಂದು, ನ್ಯಾಯಾಲಯದ ಮುಂದಿರುವ ದೊಣ್ಣೆಯನ್ನು ಮು.ಮಾ–2 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ನನ್ನ ಹೆಂಡತಿ, 1 ನೇ ಆರೋಪಿ ಹೆಂಡತಿ ವಿರುದ್ದ ಚುನಾವಣೆಯಲ್ಲಿ ಸ್ಪರ್ದಿಸಿ ಗೆದ್ದಿದ್ದರಿಂದ ದ್ವೇಷ ಇಟ್ಟುಕೊಂಡು ಆರೋಪಿತರು ನನ್ನ ವಿರುದ್ದ ಹಲ್ಲೆ ಮಾಡಿರುತ್ತಾರೆ.

**ಪಾಟೀಸವಾಲುಃ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಇದೆ.

(ಶಿರಿನ್ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.